# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 675 |
| ಸದಸ್ಯರ ಹೆಸರು : | ಶ್ರೀ ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 12-12-2025 |
| ಉತ್ತರಿಸುವ ಸಚಿವರು : | ಹಿಂದುಳಿದ ವರ್ಗಗಳ ಕಲ್ಯಾಣ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು: (ಸ್ವಂತ ಕಟ್ಟಡ & ಬಾಡಿಗೆ): ಪ್ರಿ ಮೆಟ್ರಿಕ್, ಪೋಸ್ಟ್ ಮೆಟ್ರಿಕ್ ಹಾಗೂ ವೃತ್ತಿಪರ ಹಾಸ್ಟೆಲ್‌ಗಳು ಹಾಗೂ ಒಟ್ಟು ಲಭ್ಯವಿರುವ ಸೀಟುಗಳ ಸಂಖ್ಯೆ ಎಷ್ಟು; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1245 ಮೆಟ್ರಿಕ್ ಪೂರ್ವ ಹಾಗೂ 1414 ಮೆಟ್ರಿಕ್ ನಂತರದ ಒಟ್ಟು 2659 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳ ಪೈಕಿ 1634 ಸ್ವಂತ ಕಟ್ಟಡಗಳಲ್ಲಿ, 772 ಬಾಡಿಗೆ ಕಟ್ಟಡಗಳಲ್ಲಿ ಹಾಗೂ 253 ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿದ್ಯಾರ್ಥಿನಿಲಯಗಳಲ್ಲಿ ಲಭ್ಯವಿರುವ ಸೀಟುಗಳ ವಿವರ ಈ ಕೆಳಕಂಡಂತಿದೆ. |

| ವಿದ್ಯಾರ್ಥಿ ನಿಲಯದ ವಿಧ | ಒಟ್ಟು ವಿದ್ಯಾರ್ಥಿ ನಿಲಯಗಳು | ಒಟ್ಟು ಮಂಜೂರಾತಿ ಸಂಖ್ಯೆ |
|---|---|---|
| ಮೆಟ್ರಿಕ್ ಪೂರ್ವ | 1245 | 67303 |
| ಮೆಟ್ರಿಕ್-ನಂತರ/ ವೃತ್ತಿಪರ ವಿದ್ಯಾರ್ಥಿ ನಿಲಯಗಳು | 1414 | 183338 |
| **ಒಟ್ಟು** | **2659** | **250641** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ 3 ವರ್ಷಗಳಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಹಾಗೂ ಪ್ರವೇಶಾತಿ ನೀಡಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ವರ್ಷವಾರು ವಿವರ ನೀಡುವುದು); | ಕಳೆದ 3 ವರ್ಷಗಳಲ್ಲಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಬಂದ ಅರ್ಜಿಗಳು ಹಾಗೂ ಪ್ರವೇಶಾತಿ ನೀಡಿರುವ ವಿದ್ಯಾರ್ಥಿಗಳ ಸಂಖ್ಯೆಗಳ ವಿವರ ಈ ಕೆಳಕಂಡಂತಿದೆ. |

**<u>ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:-</u>**

| ವರ್ಷ | ನವೀಕರಣ ಸಂಖ್ಯೆ | ಹೊಸದಾಗಿ ಪ್ರವೇಶ ಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಪಡೆದ ಸಂಖ್ಯೆ | ಒಟ್ಟು ಪ್ರವೇಶ ಪಡೆದ ಸಂಖ್ಯೆ |
|---|---|---|---|---|
| **2023-24** | 35842 | 95191 | 28729 | 64571 |
| **2024-25** | 35544 | 38703 | 31215 | 66759 |
| **2025-26** | 37117 | 48687 | 25963 | 63080 |

**ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:-**

| ವರ್ಷ | ನವೀಕರಣ ಸಂಖ್ಯೆ | ಹೊಸದಾಗಿ ಪ್ರವೇಶ ಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಪಡೆದ ಸಂಖ್ಯೆ | ಒಟ್ಟು ಪ್ರವೇಶ ಪಡೆದ ಸಂಖ್ಯೆ |
|---|---|---|---|---|
| **2023-24** | 71043 | 298872 | 74483 | 145526 |
| **2024-25** | 74737 | 194844 | 92857 | 167594 |
| **2025-26** | 97892 | 200530 | 63005 | 160897 |

ಇ) ಕಳೆದ 5 ವರ್ಷಗಳಲ್ಲಿ ಎಷ್ಟು ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಾಗಿದೆ: (ವರ್ಷವಾರು ವಿವರದೊಂದಿಗೆ, ವರ್ಷವಾರು ಹೆಚ್ಚಳ ಮಾಡಿರುವ ಸೀಟುಗಳ ಸಂಖ್ಯೆ ನೀಡುವುದು);

ಕಳೆದ 5 ವರ್ಷಗಳಲ್ಲಿ ಮಂಜೂರಾದ ವಿದ್ಯಾರ್ಥಿನಿಲಯಗಳ ವಿವರ ಈ ಕೆಳಕಂಡಂತಿದೆ.

| ವರ್ಷ | ಮಂಜೂರಾದ ಒಟ್ಟು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು | ಒಟ್ಟು ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ |
|---|---|---|
| 2021-22 | 1 | 100 |
| 2022-23 | 4 | 400 |
| 2023-24 | 3 | 375 |
| 2024-25 | 155 | 15470 |
| 2025-26 | 62 | 6200 |

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 308 ಬಿಎಂಎಸ್ 2021, ದಿನಾಂಕ:16.07.2021ರಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಶೇ.5%ರಷ್ಟು ಹೆಚ್ಚಳ ಮಾಡಿ, ಹೆಚ್ಚುವರಿಯಾಗಿ ಒಟ್ಟು 5000 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 417 ಬಿಎಂಎಸ್ 2022, ದಿನಾಂಕ:16.09.2022ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಸ್ಥಳಾವಕಾಶ ಲಭ್ಯವಿರುವ ಹಾಗೂ ಸುಸಜ್ಜಿತ ಮೂಲಭೂತ ಸೌಕರ್ಯ ಹೊಂದಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಶೇ.25% ರಷ್ಟು ಹೆಚ್ಚಳ ಮಾಡಿ ಹೆಚ್ಚುವರಿಯಾಗಿ ಒಟ್ಟು 30,000 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗಿರುತ್ತದೆ.

ಈ) ಶಾಲಾ-ಕಾಲೇಜುಗಳು ಪ್ರಾರಂಭವಾಗಿ 2-3 ತಿಂಗಳು ಕಳೆದರೂ ಅರ್ಜಿ ಸಲ್ಲಿಸಿ, ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಪ್ರವೇಶಾತಿ ನೀಡದೆ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ; ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಇಲಾಖೆಯ ವಿದ್ಯಾರ್ಥಿನಿಲಯಗಳ ಪ್ರವೇಶಾತಿಯನ್ನು ವಿವಿಧ ಹಂತಗಳಲ್ಲಿ ಕೈಗೊಳ್ಳಲಾಗುತ್ತಿರುತ್ತದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಾತಿಯನ್ನು ಮೊದಲ ಹಂತದಲ್ಲಿ ಕೈಗೊಳ್ಳಲಾಗುತ್ತಿದ್ದು, ಶಾಲಾ ತರಗತಿಗಳು ಪ್ರಾರಂಭದ ಅವಧಿಯನುಸಾರ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ನಿಗದಿತ ಸಮಯಕ್ಕೆ ವಿದ್ಯಾರ್ಥಿನಿಲಯಗಳಲ್ಲಿ ನಿಗದಿಪಡಿಸಿರುವ ಮಂಜೂರಾತಿ ಸಂಖ್ಯೆಗನುಗುಣವಾಗಿ ಮೆರಿಟ್ ಮತ್ತು ಪ್ರವರ್ಗವಾರು ಮೇರೆಗೆ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನಿಗದಿತ ಅವಧಿಯಲ್ಲಿ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿರುತ್ತದೆ.

| | | |
|---|---|---|
| | | ಮುಂದುವರೆದು, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಯನ್ನು ಮೂರು ಹಂತಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಮೊದಲ ಹಂತದಲ್ಲಿ ಪಿ.ಯು.ಸಿ ಮತ್ತು ಪಿ.ಯು.ಸಿ ಸಮನಾಂತರ ಕೋರ್ಸುಗಳು, ಎರಡನೇ ಹಂತದಲ್ಲಿ ಪದವಿ ಮತ್ತು ಸಾಮಾನ್ಯ ಕೋರ್ಸಗಳು ಹಾಗೂ ಮೂರನೇ ಹಂತದಲ್ಲಿ ಸ್ನಾತಕೋತರ ಮತ್ತು ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ತರಗತಿಗಳು ಪ್ರಾರಂಭದ ಅವಧಿಯನುಸಾರ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ನಿಗದಿತ ಸಮಯಕ್ಕೆ ವಿದ್ಯಾರ್ಥಿನಿಲಯಗಳಲ್ಲಿ ನಿಗದಿಪಡಿಸಿರುವ ಮಂಜೂರಾತಿ ಸಂಖ್ಯೆಗನುಗುಣವಾಗಿ ಮೆರಿಟ್ ಮತ್ತು ಪ್ರವರ್ಗವಾರು ಮೇರೆಗೆ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನಿಗದಿತ ಅವಧಿಯಲ್ಲಿ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿರುತ್ತದೆ.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿ ನಿಗದಿಪಡಿಸಿರುವ ಮಂಜೂರಾತಿ ಸಂಖ್ಯೆಗನುಗುಣವಾಗಿ ಮೆರಿಟ್ ಮತ್ತು ಪ್ರವರ್ಗವಾರು ಮೇರೆಗೆ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿರುತ್ತದೆ. ಮುಂದುವರೆದು, ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಅನುದಾನದ ಲಭ್ಯತೆಯನುಸಾರ ಮಾಸಿಕ ರೂ.1500/-ರಂತೆ 10 ತಿಂಗಳ ಅವಧಿಗೆ ರೂ.15000/-ಗಳನ್ನು ಮಂಜೂರು ಮಾಡಲಾಗುತ್ತದೆ. |
| ಉ) | ಸರ್ಕಾರಿ ಹಾಸ್ಟೆಲ್ ಸೌಲಭ್ಯ ಪಡೆಯದ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆಯೇ; ಇದರಿಂದಾಗಿ ಬಡ ವಿದ್ಯಾರ್ಥಿಗಳಿಗೆ ತೊಂದರೆಯಗುತ್ತಿದ್ದು, ಯಾವುದೇ ಸೌಲಭ್ಯವಿಲ್ಲದ ಬಡ ಗ್ರಾಮೀಣ ಮಕ್ಕಳಿಗೆ ಮೆರಿಟ್ ಮಾನದಂಡ ರದ್ದುಪಡಿಸಿ, ಎಲ್ಲರಿಗೂ ವಿದ್ಯಾರ್ಥಿ ವೇತನ ಒದಗಿಸಲು ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ? | ಸರ್ಕಾರದ ಆದೇಶ ಸಂಖ್ಯೆ:ಹಿಂವಕ 662 ಬಿಎಂಎಸ್ 2016, ದಿನಾಂಕ:04-10-2016 ಮತ್ತು ತಿದ್ದುಪಡಿ ಆದೇಶ ಸಂಖ್ಯೆ:518 ಬಿಎಂಎಸ್ 2024 ದಿನಾಂಕ:26-09-2024 ಆದೇಶಗಳನುಸಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಪ್ರವೇಶ ದೊರಕದ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆ ಅನುಸಾರ ಮೆರಿಟ್ ಆಧಾರದ ಮೇಲೆ ವಿದ್ಯಾಸಿರಿ ಯೋಜನೆಯಡಿ ಸಹಾಯಧನ ವಿತರಿಸಲು ಕ್ರಮವಹಿಸಲಾಗುತ್ತಿದೆ. ಮೆರಿಟ್ ಲಿಸ್ಟ್ ರದ್ದುಪಡಿಸುವ ಬಗ್ಗೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ. |

ಸಂಖ್ಯೆ:ಹಿಂವಕ 1207 ಬಿಎಂಎಸ್ 2025

**(ಶಿವರಾಜ ಎಸ್. ತಂಗಡಗಿ)**

ಹಿಂದುಳಿದ ವರ್ಗಗಳ ಕಲ್ಯಾಣ, ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು